(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರೊಂದಿಗೆ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾದರು)

ಅಧ್ಯಕ್ಷರು: ಮೊದಲನೆಯ ಪ್ರಕಟಣೆ ಹೀಗಿದೆ.

6) ಪ್ರಕಟಣೆ

1) ಭಾರತೀಯ ಜನತಾಪಕ್ಷದ ಉಪನಾಯಕರಾಗಿ ಶ್ರೀ ಆರ್. ಅಶೋಕ್‌ರವರನ್ನು ನೇಮಕ ಮಾಡುವ ಬಗ್ಗೆ.

ಅಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್ ಅವರು ದಿನಾಂಕ: 23ನೇ ಜನವರಿ 2014 ರಂದು ಪತ್ರ ನೀಡಿದ್ದು, ಅದರಲ್ಲಿ ಬಿ.ಜೆ.ಪಿ. ಗುಂಪಿನ ಉಪ ನಾಯಕರಾಗಿರುವ ಶ್ರೀ ಆರ್. ಅಶೋಕ್ ಅವರನ್ನು ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ಉಪನಾಯಕರನ್ನಾಗಿ ನೇಮಕ ಮಾಡಬೇಕೆಂದು ಕೋರಿರುತ್ತಾರೆ.

ಆದುದರಿಂದ, ವಿಧಾನಸಭಾ ಸದಸ್ಯರಾದ ಶ್ರೀ ಆರ್. ಅಶೋಕ್‌ರವರನ್ನು ವಿರೋಧ ಪಕ್ಷದ ಉಪನಾಯಕರನ್ನಾಗಿ ನೇಮಿಸಲಾಗಿದೆ.

2) ವಿರೋಧ ಪಕ್ಷದ ಮುಖ್ಯ ಸಚೇತಕರಾಗಿ ಶ್ರೀ ವಿ. ಸುನೀಲ್ ಕುಮಾರ್‌ರವರನ್ನ ನೇಮಕ ಮಾಡುವ ಬಗ್ಗೆ.

ಅಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್ ಅವರು ದಿನಾಂಕ: 23ನೇ ಜನವರಿ 2014 ರಂದು ಪತ್ರ ನೀಡಿದ್ದು, ಅದರಲ್ಲಿ ಬಿ.ಜೆ.ಪಿ. ಗುಂಪಿನ ಮುಖ್ಯ ಸಚೇತಕರಾದ ಶ್ರೀ ವಿ. ಸುನೀಲ್‌ಕುಮಾರ್ ಅವರನ್ನು ವಿಧಾನಸಭೆಯಲ್ಲಿ ವಿರೋಧ ಪಕ್ಷದ ಮುಖ್ಯ ಸಚೇತಕರನ್ನಾಗಿ ನೇಮಕ ಮಾಡಬೇಕೆಂದು ಕೋರಿರುತ್ತಾರೆ.

ಆದುದರಿಂದ, ವಿಧಾನಸಭಾ ಸದಸ್ಯರಾದ ಶ್ರೀ ವಿ. ಸುನೀಲ್‌ಕುಮಾರ್ ರವರನ್ನು ವಿರೋಧ ಪಕ್ಷದ ಮುಖ್ಯ ಸಚೇತಕರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.